ನೀವೆಲ್ಲರೂ ಕುಳಿತುಕೊಂಡು ಮಾತನಾಡಿ. ಇದಕ್ಕೆ ಒಂದು ಸೊಲ್ಯೂಷನ್ ಕಂಡುಹಿಡಿಯಬೇಕು. ಈಗ ಮುಂದಕ್ಕೆ ಹೋಗೋಣ. ಈಗ ಅಂಗಾರರವರ ಪ್ರಶ್ನೆ. ಅಂಗಾರರವರ ಪರವಾಗಿ ಯೋಗೀಶ್ ಭಟ್‌ರವರು ಪ್ರಶ್ನೆಯನ್ನು ಕೇಳಬೇಕು. ದಯಮಾಡಿ ಅಂಗಾರರವರ ಪರವಾಗಿ ನೀವು ಪ್ರಶ್ನೆಯನ್ನು ಕೇಳಿ. ಸಮಯ ಆಗಿ ಹೋಯಿತು. ಈ ಪ್ರಶ್ನೆಗೆ ಅವರು ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಲಾಟರಿ ನಿಂತು ಹೋಯಿತು ಎಂದೇ, ನೀವು ಹೇಳಿದ ಮೇಲೆ ಲಾಟರಿ ನಿಂತಿತೇ ?

ಅಧ್ಯಕ್ಷರು : ಸುಮ್ಮನೇ ಮಾತನಾಡುವುದು ಬೇಡ. ನೀವೆಲ್ಲಾ ಕುಳಿತುಕೊಂಡು ಮಾತನಾಡಿ, ಸಮಸ್ಯೆಯನ್ನು ಇತ್ಯರ್ಥ ಮಾಡಿ. ಸುಮ್ಮನೆ ಪದೇ ಪದೇ ಮಾತನಾಡಿದರೆ ಏನು ಪ್ರಯೋಜನವಾಗುವುದಿಲ್ಲ. ವಾಟಾಳ್‌ರವರೇ ದಯಮಾಡಿ ಕುಳಿತುಕೊಳ್ಳಿ. ಬೇಕಾದರೆ ಇನ್ನೊಂದು ಸಲ ಚರ್ಚೆ ಮಾಡೋಣ. ಅಂಗಾರರವರ ಪರವಾಗಿ ನೀವು ಪ್ರಶ್ನೆಯನ್ನು ಕೇಳಿ.

---

1. ಚುಕ್ಕಿ ಗುರುತಿನ ಪ್ರಶ್ನೆ ಸಂಖ್ಯೆ : 3586

2. ಮಾನ್ಯ ಸದಸ್ಯರ ಹೆಸರು : ಶ್ರೀ ಅಂಗಾರ.ಎಸ್. (ಸುಳ್ಯ)

3. ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th colspan="4">ಉತ್ತರಗಳು</th></tr>
<tr><td>ಅ)</td><td>ಕಳೆದ 3 ವರ್ಷದಲ್ಲಿ ಜಾಲ್ಸೂರು ಸುಬ್ರಮಣ್ಯ ರಸ್ತೆಯಲ್ಲಿ ಎಷ್ಟು ಅಪಘಾತಗಳು ಸಂಭವಿಸಿದೆ;</td><td colspan="4">28</td></tr>
<tr><td>ಆ)</td><td>ಸದರಿ ಅಪಘಾತಗಳಲ್ಲಿ ಎಷ್ಟು ಜನರಿಗೆ ಸಣ್ಣ ಪುಟ್ಟ ಮತ್ತು ತೀವ್ರ ತರದ ಗಾಯಗಳು ಆಗಿವೆ ಹಾಗೂ ಎಷ್ಟು ಜನರು ಮೃತ ಪಟ್ಟಿದ್ದಾರೆ (ಪೂರ್ತಿ ವಿವರ ನೀಡುವುದು);</td><td>ವರ್ಷ</td><td>ಸಣ್ಣಪುಟ್ಟ ಗಾಯ ಗೊಂಡವರು</td><td>ತೀವ್ರ ತರದ ಗಾಯ ಗೊಂಡವರು</td><td>ಮೃತ ಪಟ್ಟವರು</td></tr>
<tr><td></td><td></td><td>2002</td><td>5</td><td>1</td><td>2</td></tr>
<tr><td></td><td></td><td>2003</td><td>3</td><td>5</td><td>2</td></tr>
<tr><td></td><td></td><td>2004</td><td>6</td><td>7</td><td>1</td></tr>
<tr><td></td><td></td><td>2005 (28–2–05</td><td>18</td><td>–</td><td>1</td></tr>
</table>

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಇ.	ಈ ರಸ್ತೆಯಲ್ಲಿ ಅಪಘಾತ ನಡೆಯುವ ಸ್ಥಳಗಳನ್ನು ವಿಶೇಷವಾಗಿ ಗುರುತಿಸಲಾಗಿದೆಯೇ;	ಇಲ್ಲ.
ಈ.	ಈ ರಸ್ತೆಯಲ್ಲಿ ಅಪಘಾತಗಳನ್ನು ತಡೆಯುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಪ್ರತಿ ದಿನ ವಾಹನ ತಪಾಸಣೆ ನಡೆಸಿ ನಿರ್ಲಕ್ಷ್ಯತನದ ಚಾಲನೆ, ಅತಿಯಾದ ಹೇರುವಿಕೆ, ಹೈಬೀಮ್ ಲೈಟ್ ಇತ್ಯಾದಿ ಪರಿಣಾಮಕಾರಿ ಪ್ರಕರಣಗಳನ್ನು ದಾಖಲಿಸಿ ಹಾಗೂ ಅಮಲು ಸೇವಿಸಿ ವಾಹನ ಚಲಾಯಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ವಾಹನ ಚಾಲಕರುಗಳಲ್ಲಿ ಜಾಗೃತಿ ಮೂಡಿಸಿ ಅಪಘಾತಗಳನ್ನು ತಡೆಗಟ್ಟುವಲ್ಲಿ ಶ್ರಮಿಸಲಾಗುತ್ತಿದೆ. ರಸ್ತೆಯ ಹೆಚ್ಚಿನ ತಿರುವು, ಇಳಿಜಾರು, ಇಕ್ಕಟ್ಟಾದ ಸ್ಥಳಗಳಲ್ಲಿ ಹಾಗೂ ಅಪಘಾತಕ್ಕೆ ಕಾರಣವಾಗುವ ಕಿರುಸೇತುವೆ ಹಾಗೂ ಶಾಲಾ ವ್ಯಾಪ್ತಿಯ ಹತ್ತಿರದಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ.

ಶ್ರೀ ಎನ್. ಯೋಗೀಶ್ ಭಟ್ (ಶ್ರೀ ಎಸ್. ಅಂಗಾರರವರ ಪರವಾಗಿ) : ಈ ಪ್ರಶ್ನೆ ಇರುವುದು ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಹತ್ತಿರವಿರುವ ರಸ್ತೆಗಳಿಗೆ ಸಂಬಂಧಪಟ್ಟ ಹಾಗೆ. ಇಲ್ಲಿ ಅಪಘಾತಗಳು ನಡೆಯುವುದಕ್ಕೆ, ರಸ್ತೆಗಳಲ್ಲಿರುವಂಥ ಗುಂಡಿಗಳಿಂದ ಹಿಡಿದು, ರೋಡ್ ಕಟಿಂಗ್‌ನಿಂದ ಹಿಡಿದು ಅನೇಕ ಕಾರಣಗಳಿರುತ್ತವೆ. ಮಾನ್ಯ ಮುಖ್ಯಮಂತ್ರಿಗಳ ಒಲವಿನ ಯಾತ್ರಾ ಸ್ಥಳವಾಗಿರತಕ್ಕಂಥ ಸುಬ್ರಮಣ್ಯ ಕ್ಷೇತ್ರದ ಪರಿಸರದಲ್ಲೇ ಇಂಥ ದುರಂತಗಳು ನಡೆಯುತ್ತಿದ್ದು, ಇದರ ಬಗ್ಗೆ ಹೆಚ್ಚಿನ ಎಚ್ಚರಿಕೆಯನ್ನು ವಹಿಸುವಂಥಾದ್ದು ಅವಶ್ಯಕತೆ ಇದೆ. ಇದರ ಬಗ್ಗೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ವಿನಂತಿಯನ್ನು ಈ ಮೂಲಕ ಮಾಡುತ್ತಿದ್ದೇನೆ. ಎರಡನೆಯದಾಗಿ, ಅದರ ಹತ್ತಿರವಿರುವಂಥ ಶಿರಾಡಿಘಾಟ್‌ನಲ್ಲಿ ನಿರಂತರವಾಗಿ ನಡೆಯುತ್ತಿರುವಂಥ

ಟ್ಯಾಂಕರ್‌ಗಳ ಬೀಳುವಿಕೆಯಿಂದ ಆಗುವಂಥ ದುರಂತ ಹಾಗೂ ಮೈನ್ಸ್ ಲಾರಿಗಳು ಬೀಳುವುದರ ಮೂಲಕ ಆಗುವಂಥ ದುರಂತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ, ಕನಿಷ್ಠ ಮೊಬೈಲ್ ಸಂಚಾರಿ ಘಟಕ ಹಾಗೂ ಕ್ರೇನ್‌ಗಳನ್ನು ಹಾಗೂ ಮೊಬೈಲ್ ಆಸ್ಪತ್ರೆಗಳ ವ್ಯವಸ್ಥೆಯನ್ನು ತಾವು ಮಾಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕ್ರೇನ್‌ಗಳನ್ನು ಒದಗಿಸುವುದು ಮತ್ತು ಆಂಬ್ಯುಲೆನ್ಸ್ ಅಡ್ಡಾಡತಕ್ಕಂಥಾದ್ದರ ಬಗ್ಗೆ ನಾವು ಪರಿಶೀಲನೆ ಮಾಡಬಹುದು. ಆದರೆ, ಅಲ್ಲೇ ಚಿಕ್ಕದಾಗಿ ಒಂದು ಆಸ್ಪತ್ರೆ ಕಟ್ಟಿಸ ತಕ್ಕಂಥಾದ್ದು, ಅಲ್ಲಿ ಡಾಕ್ಟರ್ ಇರತಕ್ಕಂಥಾದ್ದನ್ನು ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೆ, ಮೊಬೈಲ್ ವ್ಯಾನಿನ ಬಗ್ಗೆ ಖಂಡಿತವಾಗಿ ಯೋಚನೆ ಮಾಡಬಹುದು. ಅದನ್ನು ಎಗ್ಸಾಮಿನ್ ಮಾಡುವುದಕ್ಕೆ ನಾನು ಹೇಳುತ್ತೇನೆ. ಹೆಚ್ಚಿನ ಅಪಘಾತಗಳು ಆಗತಕ್ಕಂಥಾದ್ದಕ್ಕೆ ಕಾರಣಗಳೆಂದರೆ, ಅಲ್ಲಿ ರಸ್ತೆ ಅಗಲವಾಗಿ ಕೂಡ ಇಲ್ಲ, ವಾಹನಗಳು ಜಾಸ್ತಿ ಓಡಾಡುತ್ತವೆ ಎನ್ನತಕ್ಕಂಥಾದ್ದೂ ಇದೆ. ಆ ರಸ್ತೆಯನ್ನು ರಿಪೇರಿ ಮಾಡತಕ್ಕಂಥಾದ್ದೂ ಕೂಡ ಬಹಳ ಮುಖ್ಯವಾಗಿದೆ. ಅದಕ್ಕಾಗಿ, ನಾನು ಪಿಡಬ್ಲ್ಯೂಡಿ ಮಿನಿಸ್ಟರ್‌ರವರಿಗೆ ಹೇಳಿ, ಸಾಧ್ಯವಾದಷ್ಟು ಮಟ್ಟಿಗೆ ಇದರ ಬಗ್ಗೆ ಕ್ರಮವನ್ನು ಜರುಗಿಸತಕ್ಕಂಥಾದ್ದನ್ನು ಮಾಡುತ್ತೇನೆ. ಮೂರನೆಯದಾಗಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಎಂದು ಮಾಡಿ, ರಸ್ತೆ ಸುರಕ್ಷತಾ ಸಪ್ತಾಹ ಮಾಡಬೇಕು. ಜನರನ್ನು ಎಜುಕೇಟ್ ಮಾಡಬೇಕು ಎಂದು ನಾವು ಅನೇಕ ಸಲ ಹೇಳಿದ್ದೇವೆ. ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಮತ್ತು ಬೇರೆ ಇಲಾಖೆಯವರು ಕೂಡ ಇದರಲ್ಲಿ ಭಾಗವಹಿಸಿ, ಆದಷ್ಟು ಮಟ್ಟಿಗೆ ಜನರಿಗೆ ಹೆಚ್ಚಿನ ಮಾಹಿತಿ ಕೊಡಬೇಕು ಮತ್ತು ವಿಶೇಷವಾಗಿ, ಡ್ರೈವ್ ಮಾಡ ತಕ್ಕಂಥ ಡ್ರೈವರ್‌ಗಳೂ ಕೂಡ ಎಚ್ಚರ ವಹಿಸಬೇಕು ಎಂದು ನಾವು ಈಗಾಗಲೇ ಹೇಳಿದ್ದೇವೆ. ಆ ಕಾರ್ಯಕ್ರಮ ನಡೆಯುತ್ತಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ. ಆ ಕಾರ್ಯಕ್ರಮ ಕೂಡ ನಡೆಯುತ್ತಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ನಡೆಸ ತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಕನಿಷ್ಠ ತಿರುವುಗಳಲ್ಲಿ ತಡೆಗೋಡೆಗಳನ್ನು ಕಟ್ಟುವಂಥ ಕಾರ್ಯಕ್ರಮವನ್ನು ತುರ್ತಾಗಿ ತೆಗೆದುಕೊಳ್ಳಬೇಕೆಂದು ಸಲಹೆ

ನೀಡಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅವರು ಕೊಟ್ಟಂಥ ಸಲಹೆ ಒಳ್ಳೆಯದು ಇದೆ. ಆದರೆ ಹಣದ ಲಭ್ಯತೆ ನೋಡಿಕೊಂಡು ಈ ಕೆಲಸವನ್ನು ಮಾಡಬೇಕಾಗಿದೆ. ವಿಶೇಷವಾಗಿ ಎಲ್ಲಿ ಹೆಚ್ಚಿನ ಅಪಘಾತವಾಗುತ್ತಿದೆ ಅಂಥ ತಿರುವುಗಳಲ್ಲಿ PWD ಇಲಾಖೆಗೆ ನಾವು ಸೂಚಿಸಿ ಆ ಕ್ರಮವನ್ನು ಜರುಗಿಸುತ್ತೇವೆ.

ಅಧ್ಯಕ್ಷರು : ಶ್ರೀ. ಕೆ. ಎಸ್. ಈಶ್ವರಪ್ಪನವರ ಪ್ರಶ್ನೆಗೆ ಒಂದು ವಾರದ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ನಾನು ಕೇಳಿದಂಥ ಆ ಪ್ರಶ್ನೆಯನ್ನು ಓದಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಸದಸ್ಯರು ಕೇಳಿದಂಥ ಪ್ರಶ್ನೆಗಳಿಗೆ ಉತ್ತರವನ್ನು ಕೊಡದಿದ್ದರೆ privilege ಆಗುತ್ತದೆಂದು ನಿನ್ನೆಯ ದಿವಸ ತಾವೇ ಹೇಳಿದಿರಿ. ಈಗ ನೀವೇ ಎರಡು ಪ್ರಶ್ನೆಗೆ ಕಾಲಾವಕಾಶ ಕೇಳಿದ್ದೀರಿ. ಇದು ಹೇಗೆ? ಪ್ರಶ್ನೋತ್ತರಕ್ಕೆ ಏನಾದರೂ ಬೆಲೆ ಉಂಟೇ ?

ಅಧ್ಯಕ್ಷರು : ಈಗ ನಾನು ಹೇಳುವುದನ್ನು ಕೇಳಿ. ನಾನು ಏನು ಹೇಳಿದ್ದೆ ಎಂದರೆ, ಅವರು ನಿಗದಿತ ಅವಧಿಯಲ್ಲಿ ಉತ್ತರ ಕೊಡಲೇ ಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಒಂದು ವಾರ ಸದನ ನಡೆಯುತ್ತದೆಯೇ ?

(ಗೊಂದಲ)

ಶ್ರೀ ಬಿ. ಎಸ್.ಯಡಿಯೂರಪ್ಪ : ಸದರಿ ಪ್ರಶ್ನೆಗೆ ಸಂಬಂಧಿಸಿದಂತೆ ಇದರಲ್ಲಿ 50 ಲಕ್ಷ ರೂಪಾಯಿಗಳಷ್ಟು ದುರುಪಯೋಗವಾಗಿರುವಂಥದ್ದು ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಈ ಬಗ್ಗೆ ರಿಪೋರ್ಟ್ ಇದೆ. ಈ ರಿಪೋರ್ಟ್ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಒಂದು Sentence ನಲ್ಲಿ ಉತ್ತರ ಕೊಡುವುದು ಬಿಟ್ಟು ಒಂದು ವಾರ ಕಾಲಾವಕಾಶ ಬೇಕೆಂದು ಕೇಳಿದರೆ ಇನ್ನೂ ಒಂದು ವಾರ ಸದನ ನಡೆಯುತ್ತದೆಯೇ ?

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಯಾವ ಹಳ್ಳಿಯಿಂದ ಇವರು information ತರಿಸಿಕೊಳ್ಳಬೇಕಾಗಿದೆ ?

(ಗೊಂದಲ)